**ಸಾಕ್ಷಿಯನ್ನು ದಿಃ 27.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಸಿ.ವಿ.ಎಸ್ ವಕೀಲರಿಂದಃ-**

ನಾನು 8 ನೇ ತರಗತಿವರೆಗೂ ಓದಿರುತ್ತೇನೆ. 8 ನೇ ತರಗತಿ ಓದಿದ ನಂತರ ನಾನು ಜೀವನೋಪಾಯಕ್ಕಾಗಿ ವ್ಯವಸಾಯ ಮಾಡಿಕೊಂಡಿರುತ್ತೇನೆ. ಮೊದಲು ನಾನು ರಾಮಪಟ್ಟಣ ವಾಸ ಇದ್ದು, ಈಗ ಹೆಗಡಿಕೊಪ್ಪಲಿನಲ್ಲಿ ವಾಸ ಇರುತ್ತೇನೆ. 10-12 ಹೆಗಡಿಕೊಪ್ಪಲಿನಲ್ಲಿ ವಾಸ ಇರುತ್ತೇನೆ. ರಾಮಪಟ್ಟಣಕ್ಕೂ ಹೆಗಡಿಕೊಪ್ಪಲಿಗೂ 20-25 ಕಿ.ಮೀ ಅಂತರ ಇದೆ. ದಾವೆ ಹಾಕುವ ಕಾಲಕ್ಕೆ ನನ್ನ ವಿಳಾಸ ರಾಮಪಟ್ಟಣ ವಾಸ ಎಂದು ಬರೆಸಿರುತ್ತೇನೆ. ಹೆಗಡಿಕೊಪ್ಪಲಿನಲ್ಲಿ ವಾಸ ಮಾಡುತ್ತೇನೆ ಎಂದು ಬರೆಸಿಲ್ಲ ಎಂದರೆ ಅಧಾರ್ ಕಾರ್ಡ ನಲ್ಲಿ ರಾಮಪಟ್ಟಣ ಎಂದು ಇದ್ದ ಕಾರಣ ಹಾಗೆ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

ದಿಃ 14.02.2011 ಕ್ಕೆ ನನ್ನ ಬಳಿ 2 ಲಕ್ಷ ರೂ. ಹಣ ಇತ್ತು ಎಂದು ತೋರಿಸಲು ಯಾವುದೆ ದಾಖಲೆ ಇಲ್ಲ. 27 ಪ್ರತಿವಾದಿಯಾದ ಮಂಜುಳಮ್ಮ ಕೋಂ ಕಾಳೇಗೌಡ ಎಂದರೆ ನನ್ನ ತಂಗಿ. ಜಯಮ್ಮ, ಗೌರಮ್ಮ ಮತ್ತು ಶಕುಂತಲಾ ರವರು ನನ್ನ ಸಹೋದರಿಯರು. ಅವರು ಓ. ಎಸ್ ನಂ.101/2018 ಎಂದು ಇದೆ ನ್ಯಾಯಾಲಯದಲ್ಲಿ ವಿಭಾಗ ಕೋರಿ ದಾವೆ ಹಾಕಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲ ನಾನು 2 ನೇ ಪ್ರತಿವಾದಿಯಾಗಿದ್ದೆ ಎಂದರೆ ಸರಿ. ಸದರಿ ಕೇಸ್ ನಲ್ಲಿ ನಾನು ವಕೀಲರನ್ನು ನೇಮಿಸಿಕೊಂಡಿದ್ದೆ. ಸದರಿ ದಾವೆಗೆ ನಾನು ಪ್ರತಿ ಮುದ್ದತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರು ಇರುತ್ತಿದ್ದೆ. ದಿಃ 28.02.2022 ರಂದು ಸದರಿ ದಾವೆ ತೀರ್ಮಾನ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಸಹೋದರಿಯರಿಗೆ 6 ನೇ 1 ಭಾಗ ಹಕ್ಕು ಇದೆ ಎಂದು ತೀರ್ಮಾನ ಆಗಿದೆ ಎಂದರೆ ಸರಿ. ಸದರಿ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿಯನ್ನು 8 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇನೆ. ಆ ಬಗ್ಗೆ ದಾಖಲೆಯನ್ನು ಈ ಕೇಸಿನಲ್ಲಿ ಸಲ್ಲಿಸಿಲ್ಲ. ಓ. ಎಸ್ ನಂ. 101/2018 ರಲ್ಲಿ ಈ ದಾವೆ ಬಾಕಿ ಇದ್ದ ವಿಚಾರ ಹೇಳಿಲ್ಲ. ಹಾಗೆ ಹೇಳಲು ನನಗೆ ಯಾವುದೆ ತೊಂದರೆ ಇರಲಿಲ್ಲ.

ಈ ದಾವೆಯಲ್ಲಿ ಪ್ರತಿವಾದಿಗಳು ಏನೇಂದು ತಕರಾರು ಹಾಕಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಹಾಗೆ ತಿಳಿದುಕೊಳ್ಳಲು ತೊಂದರೆ ಇರಲಿಲ್ಲ. ಅವರ ತಕರಾರಿನಲ್ಲಿ ಓ.ಎಸ್ ನಂ.101/2018 ರ ದಾವೆ ವಿಚಾರಣೆಗೆ ಬಾಕಿ ಇದೆ ಎಂದು ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ತಂದೆ ತಕರಾರು ಸಲ್ಲಿಸಿದ ನಂತರ ತೀರಿಕೊಂಡರು ಎಂದರೆ ಸರಿ. ನಾನು 8 ತರಗತಿ ಮುಗಿಸಿ ಜೀವನೋಪಾಯಕ್ಕೆ ರಾಮಪಟ್ಟಣದಲ್ಲಿ ವ್ಯವಸಾಯ ಮಾಡಿಕೊಂಡು ಇದ್ದೆ ಎಂದು ಹೇಳಿದ್ದು, ನಮ್ಮ ಮನೆಯ ಆಗು ಹೋಗುಗಳನ್ನು ನೋಡಿಕೊಂಡಿದ್ದೆ ಎಂದರೆ ಆ ಸಮಯದಲ್ಲಿ ಅಷ್ಟು ಗೊತ್ತಾಗುತ್ತಿರಲಿಲ್ಲ ಎನ್ನುತ್ತಾರೆ. ನನಗೆ ವ್ಯವಹಾರ ಜ್ಞಾನ ಅಷ್ಟಾಗಿ ಇರಲಿಲ್ಲ ಹಾಗೆ ಮನೆಯ ಆಗು ಹೋಗುಗಳನ್ನು ಕೇಳುತ್ತಿರಲಿಲ್ಲ ಎನ್ನುತ್ತಾರೆ. ನನಗೆ ವ್ಯವಹಾರ ಜ್ಞಾನ 2018 ರ ನಂತರ ಬಂದಿರುತ್ತದೆ.

ರಾಮಪಟ್ಟಣದ ಸರ್ವೆ ನಂ.58/9 ರ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ಒಟ್ಟುಕುಟುಂಬದ ಆಸ್ತಿ ಎಂದು ಓ.ಎಸ್ 101/2018 ರಲ್ಲಿ ತೀರ್ಮಾನ ಆಗಿದೆ ಎಂದರೆ ಸರಿ , ಆದರೆ ಸ್ವಯಾರ್ಜಿತ ಆಸ್ತಿ ಯಾಗಿದೆ. ಸದರಿ ದಾವೆಯಲ್ಲಿನ ಪಕ್ಷಗಾರರಿಗೆ 6 ನೇ 1 ಭಾಗ ಹಕ್ಕಿದೆ ಎಂದು ತೀರ್ಮಾನ ಅಗಿದೆ ಎಂದರೆ ಸರಿ. ಸದರಿ ಓ.ಎಸ್ 101/2018 ದಾವೆ ತೀರ್ಮಾನ ಆದ ನಂತರ ಈ ಕೇಸ್ ನಲ್ಲಿ ಮೇಲೆ ಹೇಳಿದ ಜಮೀನನ್ನು ಸೇರಿಸುವ ಪ್ರಯತ್ನ ಮಾಡಿಲ್ಲ ತಕರಾರಿನಲ್ಲಿ ಏನು ಹೇಳಿದ್ದಾರೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ದಾವೆ ಹೇಳಿದಂತೆ ತಂದೆ ಇದ್ದಾಗಲೆ ಸಹೋದರಿಯರಿಗೆ ಹೆಚ್ಚು ಖರ್ಚು ವೆಚ್ಚ ಮಾಡಿ ವಿಜೃಂಬನೆಯಿಂದ ಮದುವೆ ಮಾಡಿಕೊಟ್ಟು ಹಣ ಮತ್ತು ಅಸ್ತಿ ಕೊಟ್ಟಿದ್ದಾರೆ ಎಂದು ಹೇಳಿದ್ದು, ಆ ಬಗ್ಗೆ ಯಾವುದೆ ದಾಖಲೆ ಇಲ್ಲ.

ನನ್ನ ತಂದೆ ಅಣ ತಮ್ಮಂದಿರೆಲ್ಲಾ ದಿಃ 23.06.2005 ರಲ್ಲಿ ವಿಭಾಗ ಮಾಡಿಕೊಂಡು ಪ್ರತ್ಯೇಕ ಉಳುಮೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ಹಾಗೆ ವಿಭಾಗ ಅದ ನಂತರ ಅವರವರ ಭಾಗದ ಜಮೀನಿನಲ್ಲಿ ಸ್ವಾಧೀನಾನುಭಇದ್ದುಕೊಂಡು ಉಳುಮೆ ಮಾಡುತ್ತಾ ಅಭಿವೃದ್ದಿ ಮಾಡಿಕೊಂಡಿದ್ದರು ಎಂದರೆ ಸರಿ. ತಂದೆ ಮತ್ತು ಅವರ ಅಣ್ಣ ತಮ್ಮಂದಿರೆಲ್ಲರೂ ಸ್ವಷ್ತ ಮನಸ್ಸಿನವರು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.